## ಕಣ್ಣು, ಕಿವಿ, ಮೂಗಿಗೆ ಟ್ರೀಟ್‌ಮೆಂಟ್ ಕೊಡ್ತಾರೆ ಬಾಯಿಗೆ ನಗೆಗುಳಿಗೆ ಇಡ್ತಾರೆ!

# ಕಾಮಿಡಿ ಡಾಕ್ಟರ್!



**ಕಣ್ಣು, ಕಿವಿ, ಮೂಗು ಪರೀಕ್ಷಿಸಿ, ಶಸ್ತ್ರಚಿಕಿತ್ಸೆ ನಡೆಸುವ ಸರ್ಜನ್ ಒಬ್ಬರು, ಬದುಕಿನ ಓರೆಕೋರೆಗಳನ್ನು 'ಕಲಾ'ಕಂಗಳಲ್ಲಿ ಕಂಡು, ನಿಜ ಅರ್ಥದ 'ಚಿಕಿತ್ಸಕ' ದೃಷ್ಟಿಯನ್ನು ದಕ್ಕಿಸಿಕೊಂಡರೆ ಹೇಗಿರುತ್ತದೆ? ಈ ಪ್ರಶ್ನೆಗೆ ಉತ್ತರರೂಪದಲ್ಲಿ ಜಗದೀಶ್ ಚತುರ್ವೇದಿ ಇದ್ದಾರೆ.**

■ ರೂಪಾ ಕೆ.ಎಂ.

ಒಂದು ಕೈಯಲ್ಲಿ ಶಸ್ತ್ರಚಿಕಿತ್ಸೆಯ ಸಲಕರಣೆ ಹಿಡಿಯುವ, ಮತ್ತೊಂದು ಕೈಯಲ್ಲಿ 'ಸ್ಟ್ಯಾಂಡ್ ಅಪ್ ಕಾಮಿಡಿ'ಗಾಗಿ ಮೈಕ್ ಹಿಡಿಯುವ ಅಪರೂಪದ ವೈದ್ಯ ಡಾ. ಜಗದೀಶ್ ಚತುರ್ವೇದಿ. ನಾನಾ ಬಗೆಯ ವೈದ್ಯಕೀಯ ಉಪಕರಣಗಳನ್ನು ವರ್ಷಗಟ್ಟಲೇ ಸಂಶೋಧನೆ ನಡೆಸಿ, ಆ ಹಾದಿಯಲ್ಲಿಯೂ ಯಶ ಕಂಡ ಕೀರ್ತಿ ಅವರದು.

ಚಿಕ್ಕವಯಸ್ಸಿನಿಂದಲೂ ನಾಟಕದ ಗೀಳು ಹಚ್ಚಿಸಿಕೊಂಡ ಕನಸು ಕಂಗಳ ಈ ಹುಡುಗ ಪಳಗಿದ್ದು ಪ್ರೇಮಾ ಕಾರಂತರ ಗರಡಿಯಲ್ಲಿ. ಈಗಲೂ 'ಇಸ್ಪೀಟ್ ರಾಜ' ನಾಟಕದಲ್ಲಿ ನಟಿಸಿದ ದಿನಗಳನ್ನು ಮೆಲುಕು ಹಾಕುವ ಅವರು, ಸ್ನಾತಕೋತ್ತರ ಪದವಿ ಪಡೆಯುವವರೆಗೂ ರಂಗದ ನಂಟನ್ನು ಉಳಿಸಿಕೊಂಡವರು.

ವೈದ್ಯ, ಅದರಲ್ಲೂ ಸರ್ಜನ್ ಆದ ಮೇಲೆ ರಂಗಭೂಮಿಗೆ ಸಮಯ ನೀಡಲು ಆಗದೇ ಮೂರು ವರ್ಷಗಳಿಂದ ಸ್ಟ್ಯಾಂಡ್ ಅಪ್ ಕಾಮಿಡಿಯತ್ತ ಮುಖ ಮಾಡಿದವರು. ಜೊತೆಗೆ ವೆಬ್‌ಸಿರೀಸ್‌ನಲ್ಲೂ ನಟಿಸಿದವರು.

ಶಸ್ತ್ರಚಿಕಿತ್ಸೆ, ಸ್ಟ್ಯಾಂಡ್ ಅಪ್ ಕಾಮಿಡಿ ಜೊತೆ ಉಪಕರಣಗಳ ಸಂಶೋಧನೆ – ಹೀಗೆ ಎಲ್ಲವನ್ನೂ ಏಕಕಾಲಕ್ಕೆ ಹೇಗೆ ನಿಭಾಯಿಸುತ್ತೀರಿ ಎಂಬ ಪ್ರಶ್ನೆ ಮುಂದು ಮಾಡಿದರೆ, ತಣ್ಣಗಿನ ದನಿಯಾಗುವ ಜಗದೀಶ್, 'ಏನೇ ಕೆಲಸ ಮಾಡಿದರೂ ತಂಡದೊಂದಿಗೆ ಮಾಡುತ್ತೇನೆ. ಹಾಗಾಗಿ ಅಷ್ಟು ಕಷ್ಟ ಅನಿಸುವುದಿಲ್ಲ' ಎಂಬ ಉತ್ತರ ನೀಡುತ್ತಾರೆ.

'ಹೊರತಂದ ಉಪಕರಣಗಳ ವಿಚಾರದಲ್ಲಿ ಅವನ್ನು ಖರೀದಿಸಿ, ಮಾರುಕಟ್ಟೆಗೆ ತರುವ ಸ್ಟಾರ್ಟ್ ಅಪ್‌ಗಳ ಜೊತೆ ಕೆಲಸ ಮಾಡುತ್ತೇನೆ. ಇಎನ್‌ಟಿ ವೈದ್ಯರ ತಂಡವಿದೆ. ಸ್ಟ್ಯಾಂಡ್ ಅಪ್ ಕಾಮಿಡಿ ಶೋಗಳು ಇವೆಂಟ್ ಮ್ಯಾನೇಜ್‌ಮೆಂಟ್‌ನೊಂದಿಗೆ